ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)

## ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

## ವಿಷಯ

# ವಿಷಯಾಧಾರಿತ ಬೋಧನಾ ವಿಧಾನ – ಕನ್ನಡ

# ಘಟಕ : 01

# ಭಾಷಾ ಕೌಶಲಗಳು ಹಾಗೂ ಅವುಗಳ ವೃದ್ಧಿಸುವಿಕೆ

ಮಂಡಿಸುವವರು

**ಡಾ.ವೀರೇಂದ್ರ ಕುಮಾರ ವಾಲಿ ಎಸ್.,**

ಸಹಾಯಕ ಪ್ರಾಧ್ಯಾಪಕರು

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

# ಭಾಷಾ ಕೌಶಲಗಳು ಹಾಗೂ ಅವುಗಳ ಅಭಿವೃದ್ಧಿ ಕ್ರಮಗಳು

# ಪೀಠಿಕೆ

ಭಾಷಾ ಬೋಧನೆಯ ಸಂದರ್ಭದಲ್ಲಿ ಕಲಿಕೆ ಪ್ರಾರಂಭವಾಗುವುದು ಮೊದಲಿಗೆ ಆ ವ್ಯಕ್ತಿಯು ಕಲಿಯುವ ವ್ಯವಸ್ಥಿತವಾದ ಆಲಿಸುವಿಕೆಯ ಅನುಭವಗಳಿಂದಲೇ. ಮಗು ಕಲಿಕೆಯ ಪ್ರಾಥಮಿಕ ಹಂತದಿಂದಲೇ ವ್ಯಕ್ತಿ ತನ್ನಲ್ಲಿರುವ ಶಕ್ತಿಯನ್ನು ವ್ಯವಸ್ಥಿತವಾಗಿ ಕಲಿಯುತ್ತದೆ. ಇದನ್ನೆ ನಾವು "**ಯುಕ್ತಿ**" ಎಂದು ಕರೆಯುತ್ತೇವೆ ; ಇಂತಹ ಯುಕ್ತಿಯನ್ನು ಕಲಿಯುವುದನ್ನೇ "ಕೌಶಲ" ಎಂದು ಕರೆಯುತ್ತೇವೆ.

ಮಗುವನ್ನು ಸಂಕೀರ್ಣ ಬೋಧನೆಯಿಂದ ಹೊರತರಬೇಕಾದರೆ, ಮಗುವಿನ ಅವಶ್ಯಕತೆಯನ್ನು ಮೊದಲು ಅರ್ಥಮಾಡಿಕೊಳ್ಳುವುದು ಅನಿವಾರ್ಯ. ಕಲಿಕೆ

ಕನ್ನಡ ಭಾಷಾ ಕೌಶಲಗಳನ್ನು ಅಭ್ಯಾಸ ಮಾಡುವುದರ ಮೊದಲು ನಾವು ಮುಖ್ಯವಾಗಿ ಮೂರು ಕೌಶಲಗಳನ್ನು ಅಭ್ಯಾಸ ಮಾಡಬೇಕಾಗುತ್ತದೆ ಅವುಗಳೆಂದರೆ –

1. **ಪೂರ್ವಬೋಧನಾ ಕೌಶಲ** : ಉದಾ : ಪಾಠಯೋಜನೆ ಸಂಪೂರ್ಣ ಹಂತಗಳು.
2. **ಬೋಧನಾ ಅವಧಿಯ ಕೌಶಲ** : ಪೀಠಿಕೆ, ಪ್ರಸ್ತಾವನೆ, ವಿವರಣೆ, ದೃಷ್ಟಾಂತಗಳನ್ನು ನೀಡುವ, ಘಟನೆಯನ್ನು ತೆಗೆದುಕೊಳ್ಳುವುದು, ಉದಾ : **'ಇಲಿಗೆ ಪ್ರಾಣಸಂಕಟ ಬೆಕ್ಕಿಗೆ ಚೆನ್ನಾಟ'**. ಎಂಬುದಾಗಿ ವಿವರಣೆ ನೀಡುವುದು. ಪುನರ್ಬಲನ, ಪಾಠ ಬೆಳವಣಿಗೆ, ಪ್ರಶ್ನೆಗಳು, ಕಪ್ಪುಹಲಗೆ ಕಾರ್ಯ ಇತ್ಯಾದಿ.
3. **ಬೋಧನೋತ್ತರ ಕೌಶಲ** : ಮೌಲ್ಯಮಾಪನ, ಕಪ್ಪುಹಲಗೆ, ಘಟಕ ಯೋಜನೆ, ನೀಲನಕ್ಷೆ, ಪರೀಕ್ಷೆ ನಿರ್ವಹಣೆ, ಪರಿಹಾರ ಕ್ರಮಗಳು, ಪರೀಕ್ಷೆ ನಡೆಸುವುದು.

## ೧. ಆಲಿಸುವಿಕೆ ಕೌಶಲ

ಅತ್ಯುತ್ತಮವಾಗಿ ಕೇಳುವವ ಉತ್ತಮವಾಗಿ ಮಾತನಾಡಬಲ್ಲ. ಭಾಷೆ ಕಲಿತ ಕ್ರೀಯೆ, ಸಾಧಿತ ಕ್ರೀಯೆಯಾಗಿರುತ್ತದೆ. ಕೇಳುವುದರ ಮೂಲಕ ಕಲಿಕೆ ಉತ್ತಮವಾಗುತ್ತದೆ. ಇದೊಂದು "ಸ್ವೀಕೃತ" ಕೌಶಲ ಎಂದು ಕರೆಯುತ್ತಾರೆ. ಅಂದರೆ, "ಪ್ರಜ್ಞಾಪೂರ್ವಕವಾಗಿ ಉದ್ದೇಶಪೂರ್ವಕವಾಗಿ ವ್ಯಕ್ತಿಯೋರ್ವನು ಸ್ವೀಕರಿಸುವ ಸಂಗತಿಯನ್ನು ಆಲಿಸುವಿಕೆ ಎನ್ನುತ್ತೇವೆ".

**ವ್ಯಾಖ್ಯೆಗಳು : –**

1. "ಶ್ರವಣ ನರವ್ಯೂಹದ ಮೂಲಕ ಭೌತ ಸ್ಪಂದನೆಗಳನ್ನು ಗ್ರಹಿಸುವ ಶಾರೀರಿಕ ಕ್ರೀಯೆಯೇ ಆಲಿಸುವಿಕೆ". ಎನ್ನಬಹುದು.
2. "ಧ್ವನಿ ಸಂಕೇತಗಳನ್ನು ಕೇಳುವ, ಗುರುತಿಸುವ, ವ್ಯಾಖ್ಯಾನಿಸುವ ಕ್ರೀಯೆ".

## ಆಲಿಸುವಿಕೆಯಲ್ಲಿ ಗಮನಿಸುವ ಅಂಶಗಳು

1. ಉದ್ದೇಶ ಪೂರ್ವಕವಾಗಿ ಆಲಿಸುವುದು. ಉದಾ : ಭಾಷಣ, ಟೇಪ್‌ರೆಕಾರ್ಡರ್.
2. ಮಾನಸಿಕ ಏಕಾಗ್ರತೆ.
3. ಧ್ವನಿ ಏರಿಳಿತಗಳ ಸ್ಪಷ್ಟತೆ.
4. ಸಂದರ್ಭ/ಸನ್ನಿವೇಶ
5. ಪರಿಸರ
6. ಪೂರ್ವಾಗ್ರಹ
7. ವಿಷಯ ವಸ್ತು / ಮಾಹಿತಿ / ಸಂವಹನ

## ಆಲಿಸುವಿಕೆಯ ಬಗೆಗಳು

1. **ನಿಷ್ಕ್ರೀಯ ಶ್ರವಣ** : ಅನ್ಯಕಾರ್ಯದಲ್ಲಿ ತೊಡಗಿ ವಿಷಯವನ್ನು ಕೇಳುವುದರಲ್ಲಿ ವ್ಯತ್ಯಾಸವನ್ನು ಕಾಣುವುದು. ಉದಾ : ಬಸ್ಸು ಹಾರ್ನ್, ಟೇಪ್‌ರೆಕಾರ್ಡ್‌ರ್ ರೇಡಿಯೋ, ಕೇಳುವುದು. ತರಗತಿಯಲ್ಲಿ ನಿಧಾನವಾಗಿ ಮಾತನಾಡುವುದು.
2. **ಪ್ರಶಂಸಾ ಶ್ರವಣ** : ವಿದ್ಯಾರ್ಥಿಗಳಲ್ಲಿ ಕೇಳುವುದರ ಮೂಲಕ ವಿಷಯದ ಕುರಿತು ಪ್ರಶಂಸೆಯನ್ನು ವ್ಯಕ್ತಪಡಿಸುವುದು. ಉದಾ : ಉತ್ತಮ ಹಾಡುಗಳನ್ನು ಕೇಳುವುದು.
3. **ಅವಧಾನಾತ್ಮಕ ಶ್ರವಣ** : ನಿರ್ದೇಶನಗಳನ್ನು ಕೇಳಿದಾಗ ಹಾಗೂ ಅವುಗಳನ್ನು ಪಾಲಿಸಿದಾಗ ಅದನ್ನು ಅವಧಾನಾತ್ಮಕ ಶ್ರವಣ ಎನ್ನುತ್ತೇವೆ.
4. **ವಿಶ್ಲೇಷಣಾತ್ಮಕ ಶ್ರವಣ** : ಧ್ವನಿ, ಪದಗಳ ಅರ್ಥ, ಭಾವಾರ್ಥ ಎರಡೆರಡನ್ನು ಕೊಡುತ್ತವೆ. ಉದಾ : ಹಾಡುಗಾರಿಕೆ, ಭಾಷಣ

5. **ಟಿಪ್ಪಣಿಗಾಗಿ ಶ್ರವಣ** : ತರಗತಿಯ ಸನ್ನಿವೇಶದಲ್ಲಿ ವಿದ್ಯಾರ್ಥಿಗಳು ಶಿಕ್ಷಕರ ಸಲಹೆ ಸೂಚನೆಗಳನ್ನು ಕ್ರಮಬದ್ಧವಾಗಿ ಬರೆದುಕೊಳ್ಳುವುದನ್ನು ಟಿಪ್ಪಣಿಗಾಗಿ ಶ್ರವಣ ಎನ್ನಬಹುದು.

6. **ಪರಸ್ಪರ ಸಂವಹನಕ್ಕಾಗಿ ಶ್ರವಣ** : ವಿದ್ಯಾರ್ಥಿ / ವ್ಯಕ್ತಿಯೋರ್ವನು ಇನ್ನೊಬ್ಬ ವ್ಯಕ್ತಿಯನ್ನು ತನ್ನ ವಿಷಯ ಸಂಭಾಷಣೆಗಾಗಿ ಬಳಸಿಕೊಳ್ಳುವ ಪ್ರಕ್ರೀಯೆಯನ್ನು ಪರಸ್ಪರ ಸಂವಹನಕ್ಕಾಗಿ ಶ್ರವಣ ಎನ್ನಬಹುದು.

ಉದಾ : ಸರ್ವಜ್ಞ –

**ಹೇಳಿದ್ದನ್ನೇ ಹೇಳುವರು, ಕೇಳಿದ್ದನ್ನೇ ಕೇಳುವರು**
**ಕೇಳಿದ್ದೇ ಕೇಳಿ ಸುಖಿಸುವರು**
**ಗುರುಗಳ ಹೇಳಿಕೆಯೇ ಬೇರೆ ಸರ್ವಜ್ಞ.**

## ಆಲಿಸುವಿಕೆಯ ದೋಷಗಳು

1. ಶ್ರವಣ ದೋಷಗಳು ಮತ್ತು ಅನಾರೋಗ್ಯ – ಕಿವಿ ಸೋರುವಿಕೆ, ಕೇಳಿಸದೆ ಇರುವುದು
2. ಮಾನಸಿಕ ಸಿದ್ಧತೆ ಇಲ್ಲದಿರುವುದು – ಶಾರೀರಿಕ & ಮಾನಸಿಕ ಸಿದ್ಧತೆಯ ಕೊರತೆ
3. ಭಾಷೆಯ ಸಂಪೂರ್ಣ ಪರಿಚಯವಿಲ್ಲದಿರುವಿಕೆ – ಧ್ವನಿ, ಏರಿಳಿತ, ಶಬ್ಧ ಭಂಡಾರ, ವಾಕ್ಯ
4. ಮಾನಸಿಕ ವಿಕ್ಷಿಪ್ತೆ – ಭಯ, ಸಂಕೋಚ, ವಾತಾವರಣ
5. ವಿಷಯವನ್ನು ಅಪೂರ್ಣವಾಗಿ ಕೇಳುವುದು – ಕ್ಲಿಷ್ಟ ಅಂಶಗಳನ್ನು ಕೈಬಿಡುವುದು, ಟಿಪ್ಪಣಿ
6. ವೈಯಕ್ತಿಕ ದೋಷಗಳು – ಪೂರ್ವಾಗ್ರಹ, ಮೇಲು–ಕೀಳು, ಅಹಂಕಾರ, ಆಸಕ್ತಿ
7. ಅಸ್ಪಷ್ಟ ಉಚ್ಚಾರಣೆಯಾದಾಗ – ಲ–ಳ, ಹ–ಅ, ಭಾಷೆ–ಭಾಸೆ, ಹಣ್ಣು–ಅಣ್ಣು,
8. ಆತುರ, ಭಯ, ಸಂಕೋಚದ ಕೊರತೆ –

9. ಆಯಾಸವಾದಾಗ.

10. ಹಗಲುಕನಸು ಕಾಣುವುದು.

11. ಸಹನೆಯನ್ನು ಕಳೆದುಕೊಂಡಾಗ.

12. ಅಪೂರ್ಣವಾಗಿ ಕೇಳುವುದು.

13. ವ್ಯಕ್ತಿಯ ಬಗೆಗೆ ಪೂರ್ವಾಗ್ರಹ ಪೀಡಿತನಾಗಿ ಕೂರುವುದು.

14. ತಪ್ಪು ಹುಡುಕುವ ದೃಷ್ಟಿಯಿಂದ ಕೇಳುವುದು.

15. ಆಸನದ ವ್ಯವಸ್ಥೆ

16. ಗಾಳಿ ಮತ್ತು ಬೆಳಕಿನ ವ್ಯವಸ್ಥೆ

## ಆಲಿಸುವಿಕೆಯ ದೋಷಗಳನ್ನು ಪತ್ತೆಹಚ್ಚುವ ವಿಧಾನಗಳು

1. ತರಗತಿಯಲ್ಲಿ ವಿದ್ಯಾರ್ಥಿಗಳು ಪುನರಾವರ್ತನೆಯನ್ನು ಅಪೇಕ್ಷಿಸಿದಾಗ.
2. ಅನಾಸಕ್ತಿಯಿಂದ ಕೇಳುವುದು.
3. ವಿದ್ಯಾರ್ಥಿಯ ಧ್ವನಿ, ಭಾಷಾ ಬಳಕೆಯ ಶೈಲಿಯ ಮೇಲೆ ಅವಧಾನ ಕೇಂದ್ರೀಕರಿಸಿದಾಗ.
4. ಏಕಾಗ್ರತೆಯ ಕೊರತೆ.
5. ಶಿಕ್ಷಕರು ಉನ್ನತವಾದ ಭಾಷೆಗಳನ್ನು ಬಳಸಿದಾಗ
6. ತಪ್ಪು ಉಚ್ಚಾರಣೆಗೆ ಹೆಚ್ಚು ಆಸಕ್ತಿ ತೋರಿಸುವುದು.
7. ಮೆಲುದನಿಯಲ್ಲಿ ಮಾತನಾಡಿದಾಗ.

## ಆಲಿಸುವಿಕೆಯ ದೋಷಗಳನ್ನು ಪತ್ತೆ ಹಚ್ಚಲು ಬಳಸಬಹುದಾದ ಕ್ರಮಗಳು :

1. ಧ್ವನಿಗಳ ಏರಿಳಿತ ಮಾಡುವುದು.
2. ಉಕ್ತಲೇಖನ ಬರೆಸುವುದು.
3. ಪ್ರಶ್ನೆಗಳನ್ನು ಕೇಳುವುದು.
4. ಮೆಲುಧ್ವನಿಯಲ್ಲಿ ಮಾತನಾಡುವುದು.
5. ನಿರ್ದಿಷ್ಟವಾದ ಸೂಚನೆಗಳನ್ನು ನೀಡದಿರುವುದು.
6. ಅಪರಿಚಿತವಾದ ಪದಗಳನ್ನು ಬಳಸುವಿಕೆ.
7. ಪರಿಚಿತ ಶಬ್ಧಗಳನ್ನು ಉಚ್ಚರಿಸುವಿಕೆಯ ಸಮಸ್ಯೆಗಳನ್ನು ತೊಡಗಿಸುವುದು.
8. ಸೂಚನೆಗಳನ್ನು ನಿರ್ದಿಷ್ಟವಾಗಿ ನೀಡದಿರುವುದು.

## ಆಲಿಸುವಿಕೆಯ ದೋಷದ ಪರಿಹಾರ ಕ್ರಮಗಳು

1. ಶಾಲೆಯನ್ನು ಜನನಿಬಿಡ ಪ್ರದೇಶದಿಂದ ದೂರವಿಡುವುದು.
2. ಶಬ್ಧ ಮಾಲಿನ್ಯ ಪ್ರದೇಶದಿಂದ ದೂರವಿಡುವುದು.
3. ತರಗತಿಯಲ್ಲಿ ಸದ್ದುಗದ್ದಲವಿಲ್ಲದ ವಾತಾವರಣವನ್ನು ಸೃಷ್ಟಿಸುವುದು.
4. ಶಿಕ್ಷಕರ ಧ್ವನಿ ಅನಗತ್ಯವಾಗಿ ಅನೌಚಿತ್ಯಕ್ಕೆ ಏರಬಾರದು.
5. ಪರಿಚಿತ ಶಬ್ಧ, ಪದಗಳ ಬಳಕೆಯಿಂದ ಆಲಿಸುವಿಕೆ ಹೆಚ್ಚಿಸುವುದು.
6. ಶಿಕ್ಷಕರ ಸ್ಪಷ್ಟ ಉಚ್ಚಾರಣೆ, ಪ್ರಾಸ ಪದಗಳು, ಚರ್ಚೆ, ಸಂವಾದದ ಸಂಘಟನೆ.
7. ಶಿಕ್ಷಕ ನಿರ್ದಿಷ್ಟ ಸೂಚನೆಗಳನ್ನು ಕೊಡಬೇಕು.
8. ವಿದ್ಯಾರ್ಥಿಗಳ ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುವುದು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

## ವಿಷಯ

# ವಿಷಯಾಧಾರಿತ ಬೋಧನಾ ವಿಧಾನ – ಕನ್ನಡ

## ಘಟಕ : 01 (1.2)

# ಮಾತುಗಾರಿಕೆಯ ಕೌಶಲದ ಅರ್ಥ,ವ್ಯಾಖ್ಯೆ ಹಾಗೂ ದೋಷಗಳು

ಮಂಡಿಸುವವರು

ಡಾ.ವೀರೇಂದ್ರ ಕುಮಾರ ವಾಲಿ ಎಸ್.,

ಸಹಾಯಕ ಪ್ರಾಧ್ಯಾಪಕರು

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

## ಪೀಠಿಕೆ

ಮಾತುಗಾರಿಕೆ ಅಥವಾ ವಾಕ್ ಕೌಶಲವು ಸಕ್ರೀಯ ಭಾಷಾ ಕೌಶಲಗಳಲ್ಲೊಂದು. ಮಾತುಗಾರನು ಧ್ವನ್ಯಂಗಗಳ ನೆರವಿನಿಂದ ಶಬ್ದೋತ್ಪತ್ತಿ ಮಾಡಿ ಭಾವನೆಗಳಿಗೆ ಭಾಷೆಯ ಶರೀರ ತೊಡಿಸುವುದರಿಂದ ಮಾತುಗಾರಿಕೆಯನ್ನು ಉತ್ಪಾದಕ ಕೌಶಲವೆಂದು ಪರಿಗಣಿಸಲಾಗುತ್ತದೆ.

ಮಗು ಹುಟ್ಟಿನಿಂದ ಮಾತನಾಡುವುದನ್ನು ಕಲಿಯುವುದಿಲ್ಲ, ಅದು ತಾನು ಬೆಳೆಯುವ ಪರಿಸರಕ್ಕೆ ಅನುಗುಣವಾಗಿ ತಾನೂ ಅಂಥದ್ದೇ ಧ್ವನಿಗಳನ್ನು ಉಚ್ಚರಿಸಲು ಪ್ರಯತ್ನಿಸುತ್ತದೆ. ಅನುಕರಣೆ ಹಾಗೂ ಯತ್ನ – ದೋಷಗಳಿಂದ ಮಾತನ್ನು ಕಲಿಯುತ್ತದೆ. ಆದ್ದರಿಂದಲೇ ಭಾಷೆಯನ್ನು ಎಲ್ಲ ಭಾಷೆಗಳ ಮೂಲ ಬೇರು ಎನ್ನುತ್ತಾರೆ. **“ಮನುಷ್ಯನ ಸಾಹಸಿದ್ಧಿಯನ್ನು**

## ಮಾತುಗಾರಿಕೆ ವ್ಯಾಖ್ಯೆಗಳು :

1. ಮಾತುಗಾರಿಕೆ ಎಂದರೆ – "ಸ್ಪಷ್ಟವಾಗಿ ತಪ್ಪಿಲ್ಲದೆ, ತರ್ಕಬದ್ಧವಾಗಿ ಕೇಳುವವರಿಗೆ ಹಿತವಾಗುವಂತೆ ನಮ್ಮ ಭಾವನೆಗಳನ್ನು ಮತ್ತು ಭಾವಗಳನ್ನು ವ್ಯಕ್ತಪಡಿಸುವುದು."
2. ಧ್ವನ್ಯಂಗಗಳ ಮೂಲಕ ಶಬ್ದೋತ್ಪತ್ತಿಗಳ ಮೂಲಕ ಭಾಷೆಯಲ್ಲಿ ಹೇಳುವುದೇ ಭಾಷೆ.
3. ನಮ್ಮ ಮನಸ್ಸಿನ ಭಾವನೆಗಳನ್ನು ಸೂಕ್ತ ರೂಪದಲ್ಲಿ ಹೊರಹಾಕುವುದು ಎಂದರ್ಥ.
4. ಮಾತಿನ ಬಗೆಗೆ ಇನ್ನಿತರ ಹೇಳಿಕೆಗಳೆಂದರೆ –

   ಅ) ಮಾತು ಬೆಳ್ಳಿ ಮೌನ ಬಂಗಾರ. ಆ) ನುಡಿದರೆ ಮುತ್ತಿನ ಹಾರದಂತಿರಬೇಕು.

   ಇ) ಮಾತೆಂಬುದು ಜ್ಯೋರ್ತಿಲಿಂಗ ಈ) ರಸಿಕನಾಡುವ ಮಾತು ಶಶಿಯುದಯಿಸಿ ಬಂದಂತೆ.

   ಉ) ಕುಲಂ ನಾಲಿಗೆ ಅರಿಯಿತು ಊ) ಸುರಗಿಯ ಮೊನೆ ನಂಜು ; ಉರಗದ ಹಲ್ಲು ನಂಜು.

   ಋ) ಮಾತಿನಿಂದ ಹಗೆ ಕೊಲೆಯು ಎ) ಮಾತಿಗೊಂದು ಅರ್ಥಬೇಕೆ ; ಅರ್ಥವಿದ್ದರೆ ಅಷ್ಟೆ ಸಾಕೆ.

4. ಮಾತು ಜೀವನದ ಅನೇಕ ಸಂಗತಿಗಳ ಬಗೆಗೂ ವಿಸ್ತಾರತೆಯನ್ನು ಸೂಚಿಸುತ್ತದೆ.

ಅ) ಮಾತಿನಲ್ಲಿ ಸಾವಿದೆ – ಕರ್ಣನಿಗೆ ಕುಂತಿಯ ಮಾತು.

ಆ) ಮಾತಿನಲ್ಲಿ ಮೋಡಿಯಿದೆ – ಶಕುನಿಯ ಮಾತು.

ಇ) ಮಾತಿನಲ್ಲಿ ಮಂತ್ರಶಕ್ತಿಯಿದೆ – ಕೃಷ್ಣನ ಚಾಣಾಕ್ಷತೆ ಮತ್ತು ಹುರಿದುಂಬಿಸುವ ಮಾತುಗಳು.

ಈ) ಮಾತಿನಲ್ಲಿ ಜೀವವಿದೆ – ಕುಂತಿ ಅವಸರದಲ್ಲಿ ಬಸಿರನ್ನು ಉಸಿರಿಕೊಂಡಿದ್ದರಿಂದ ಕರ್ಣನ ಜನ್ಮ.

ಉ) ಮಾತಿನಲ್ಲಿ ಅಮೃತವಿದೆ – ಭೀಷ್ಮ ದುರ್ಯೋಧನನಿಗೆ ಬದುಕುವ ಮಾತು ಹೇಳುವುದು.

ಪಾರ್ಲಿಮೆಂಟಿನಲ್ಲಿ ಆಡುವ ಮಾತು – ಹೇಳಿಕೆ

ಎರಡು ಮಾತುಗಳು ಆಡುವುದು – ಭಾಷಣ

ಅತಿಥಿಗಳ ಮಾತು – ಉಪದೇಶ.

## ಮಾತುಗಾರಿಕೆಯ ದೋಷಗಳು :

1. **ಅಲ್ಪಪ್ರಾಣ ಮತ್ತು ಮಹಾಪ್ರಾಣಕ್ಕೆ ಸಂಬಂಧಿಸಿದ ದೋಷಗಳು :** ಉದಾ :– ಉಪಾಧ್ಯಾಯ – ಉಪಾದ್ಯಾಯ, ಶಾಕಾಹಾರ – ಶಾಖಾಹಾರ, ಸಮಾದಾನ – ಸಮಾಧಾನ, ದಾರ್ಮಿಕ – ಧಾರ್ಮಿಕ, ಬಯಾನಕ – ಭಯಾನಕ, ಪಲಾಹಾರ – ಫಲಾಹಾರ, ಬುದ್ದಿ – ಬುದ್ಧಿ.
2. **ಉಚ್ಚಾರಣೆಯ ದೋಷ :** ಉದಾ :– ಉತ್ಸಾಹ–ಉಸ್ಸಾಹ, ಪಾಯಸ–ಪಾಯಷ, ಪಳಾರ–ಫಲಾಹಾರ, ಆತಂಕ–ಹಾತಂಕ, ಆಕಾಂಕ್ಷೆ–ಹಾಕಾಂಕ್ಷೆ, ಆಸೆ–ಹಾಸೆ, ಅಕ್ಕಿ–ಹಕ್ಕಿ, ಹೋರಾಟ–ಓರಾಟ.
3. **ಒತ್ತಕ್ಷರಗಳಿಗೆ ಸಂಬಂಧಿಸಿದಂತೆ:** ಉದಾ :– ಮಾತ್ಸರ್–ಮಾಸ್ತರ್, ವಿಶೇಷ–ವಿಸೇಸ, ಪ್ರಶಂಸೆ–ಪ್ರಸಂಸೆ, ದೋಸೆ–ದೋಶೆ, ಶೇಷಾದ್ರಿ–ಸೇಸಾದ್ರಿ, ಶಂಕರ–ಸಂಕರ, ಷಣ್ಮುಖ–ಸಷ್ಮುಖ, ಶಾಸ್ತ್ರ–ಸಾಸ್ತ್ರ.
4. **ಪರಿಸರದ ತೊಂದರೆಯಿದ್ದಾಗ :** ಉದಾ :– ಆಂಗ್ಲರ ದಾಳಿಯಿಂದ ಇಂದು ನಾವು ಇಸ್ಕೂಲು, ಸೈಂಕಲ್, YES,OK,TOP,BUS, PEN, RAIL, GATE, ECT.

## ಮಾತುಗಾರಿಕೆಯ ದೋಷಗಳನ್ನು ಪರಿಹರಿಸಲು ಬಳಸಬಹುದಾದ ಮಾರ್ಗಗಳು :

1. ವರ್ಣಮಾಲೆಯನ್ನು ಪರಿಚಯಿಸಬೇಕು. (ಅಲ್ಪಪ್ರಾಣ, ಮಹಾಪ್ರಾಣ)
2. ಉಚ್ಚಾರಣಾ ಕ್ರಮವನ್ನು ಸರಿಯಾಗಿ ಉಚ್ಚರಿಸುವುದು.
3. ಕಂಠಪಾಠ ಅಭ್ಯಾಸ ಮಾಡಿಸುವುದು.
4. ನಾಲಿಗೆ ಸುರುಳಿ ಪದಗಳನ್ನು ಹೇಳಿಸುವುದು. ಉದಾ – ನನ್ದನ ನನ್ದನ ನನ್ದನ ನನ್ನಿನನ್ದನ .....
5. ಯುಗ್ಮ ಪದಗಳನ್ನು ಬಳಸಿಕೊಂಡು ಬೋಧಿಸುವುದು.

   ಅ) ಹುರುಳಿ ಚೀಲ ಉರುಳಿ ಹೋಯ್ತು. ಆ) ದನದ ಮೇಲೆ ಧನದ ಚೀಲ

   ಇ) ಹಕ್ಕಿಗೆ ಅಕ್ಕಿ ಮೇಲೆ ಆಸೆ ಈ) ಹಗ್ಗದ ಬೆಲೆ ತುಂಬಾ ಅಗ್ಗ.

6. ನಿರ್ದಿಷ್ಟ ಅಕ್ಷರಗಳು ಹುಟ್ಟುವ ಸ್ಥಾನವನ್ನು ಗುರುತಿ ಹೇಳುವುದು.

7. ಪ್ರಶ್ನೆಗಳನ್ನು ಕೇಳಲು ಹೆಚ್ಚಿನ ಅವಕಾಶ ಕೊಡಬೇಕು.

8. ಪದ ಮತ್ತು ವಾಕ್ಯಗಳ ಉಚ್ಚಾರಣಾ ಕ್ರಮಗಳನ್ನು ತಿಳಿದು ಆದ್ಯತೆ ನೀಡುವುದು.

9. ವಿವಿಧ ಪದ ಮತ್ತು ವಾಕ್ಯಗಳ ಅರ್ಥ ಹಾಗೂ ವಿಶೇಷತೆಗಳನ್ನು ತಿಳಿಸುವುದು.

10. ಲಿಂಗ, ವಚನ, ವಿಭಕ್ತಿಗಳ ಬಗೆಗೆ ಜ್ಞಾನವನ್ನು ನೀಡುವುದು.

11. ಸಾಮೂಹಿಕ ಗಾಯನದಲ್ಲಿ ತೊಡಗಿಸುವುದು.

12. ಕ್ರಮಬದ್ಧವಾದ ಜೀವನವನ್ನು ನಡೆಸಲು ಮಾರ್ಗದರ್ಶಿಸುವುದು.

13. ತಂಬಾಕು, ಮದ್ಯಪಾನದಿಂದ ದೂರವಿರುವುದು.

14. ಪುಟಾಣಿ ನಾಟಕ, ಏಕಪಾತ್ರಾಭಿನಯ, ಚರ್ಚಾಕೂಟ, ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳುವುದು.

15. ಅನುಕರಣೆ, ಜಾಹಿರಾತುಗಳನ್ನು ನೀಡುವುದು.

## ಮಾತುಗಾರಿಕೆಯನ್ನು ಅಭಿವೃದ್ಧಿಗೊಳಿಸುವ ಚಟುವಟಿಕೆಗಳು/ನಿವಾರಣೋಪಾಯಗಳು

1. **ಸಂಭಾಷಣೆ :** ಅಣ್ಣ–ತಮ್ಮ, ಶಿಕ್ಷಕ–ವಿದ್ಯಾರ್ಥಿಗಳು, ಗೆಳೆಯರು, ಪ್ರಶ್ನೋತ್ತರ ಮಾಲಿಕೆ, ಚಿತ್ರಗಳನ್ನು ಪ್ರದರ್ಶಿಸಿ ಸಂಭಾಷಿಸುವುದು.
2. **ಕಥೆ ಹೇಳುವುದು :** ಕಥೆ ಎಂದರೆ ಎಲ್ಲರಿಗೂ ಇಷ್ಟ ಪಂಚತಂತ್ರ, ರಾಮಾಯಣ, ಮಹಾಭಾರತ, ಕಥೆಯನ್ನು ಹೇಳುವುದರ ಮೂಲಕ ರಸಭಾವಗಳನ್ನು ಅನುಭವಿಸಬಹುದು.
3. ಚಿತ್ರಪಟ
4. ಹಾಡುಗಾರಿಕೆ
5. ಭಾಷಣ